## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2018-19 ನೇ ಸಾಲಿನಲ್ಲಿ ಅತಿವೃಷ್ಟಿ / ನೆರೆಯಿಂದ ಹಾನಿಗೀಡಾದ ಕೊಡಗು ಜಿಲ್ಲೆಯ ನಿರ್ವಸಿತರಿಗೆ / ಸಂತ್ರಸ್ಥರಿಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ವತಿಯಿಂದ ಜಿಲ್ಲೆಯ ಮಾದಾಪುರ (ಜಂಬೂರು) ಗ್ರಾಮದಲ್ಲಿ ಬಡಾವಣೆ ಮತ್ತು ಸಂಪರ್ಕ ರಸ್ತೆಗಳನ್ನು ನಿರ್ಮಿಸುವ ಬಗ್ಗೆ

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ವಇ 233 ಹೆಚ್ಎಎಂ 2018, ದಿನಾಂಕ: 05-12-2018
2) ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ: RGRHCL 05 Flood Relief 02/2018,. Dt. 03-11-2018

**ಪ್ರ ಸ್ತಾ ವ ನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ, 2018-19 ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಅತ್ಯಂತ ದಾಖಲೆ ಪ್ರಮಾಣದಲ್ಲಿ ಅತಿ ವೃಷ್ಟಿಯಾಗಿ, ಜಿಲ್ಲೆಯಾದ್ಯಂತ ನದಿಗಳು ಉಕ್ಕಿ ಹರಿದು ಪ್ರವಾಹ ಉಂಟಾಗಿ, ಬಹಳಷ್ಟು ಕಡೆ ಭೂ ಕುಸಿತಗಳು ಉಂಟಾಗಿ ಸಾರ್ವಜನಿಕ ರಸ್ತೆಗಳು, ಮನೆಗಳು, ಸೇತುವೆಗಳು ಹಾನಿಗೀಡಾಗಿ ಮೂಲಭೂತ ಸೌಕರ್ಯಗಳಿಗೆ ಬಹಳಷ್ಟು ಹಾನಿಯಾದ ಕಾರಣ ಸಂತ್ರಸ್ಥರಿಗೆ ತುರ್ತಾಗಿ ಪುನರ್ವಸತಿ ಕಲ್ಪಿಸುವ ಸಲುವಾಗಿ, ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಕಂದಾಯ ಇಲಾಖೆಗೆ ಸಲ್ಲಿಸಿದ ಒಟ್ಟು ರೂ. 31.63 ಕೋಟಿಗಳ ಅಂದಾಜು ವೆಚ್ಚದಲ್ಲಿ ಜಿಲ್ಲೆಯ ಕೆಳಕಂಡ 5 ಸ್ಥಳಗಳಲ್ಲಿ ಬಡಾವಣೆ ನಿರ್ಮಾಣ ಮಾಡುವ ಪ್ರಸ್ತಾವನೆಗೆ ಸರ್ಕಾರದ ಮಂಜೂರಾತಿ ನೀಡಲಾಗಿದೆ.

(ಕೋಟಿ ರೂಪಾಯಿಗಳಲ್ಲಿ)

| ಕ್ರ ಸಂ | ಬಡಾವಣೆಯ ಹೆಸರು | ವಿಸ್ತೀರ್ಣ (ಎಕರೆಗಳಲ್ಲಿ) | ಒಟ್ಟು ನಿವೇಶನಗಳ ಸಂಖ್ಯೆ | ಬಡಾವಣೆ ನಿರ್ಮಾಣದ ಅಂದಾಜು ವೆಚ್ಚ ರೂ. | ಸಂಪರ್ಕ ರಸ್ತೆ ನಿರ್ಮಿಸಲು ಅಂದಾಜು ವೆಚ್ಚ ರೂ. | ಒಟ್ಟು ಅಂದಾಜು ವೆಚ್ಚ ರೂ. |
|---|---|---|---|---|---|---|
| 1 | ಸರ್ವೆ ನಂ.54/1 ಸಂಪಾಜೆ ಗ್ರಾಮ | 1.17 | 27 | 2.65 | 0.65 | 3.30 |
| 2 | ಸರ್ವೆ ನಂ. 103, ಗಾಳಿಬೀಡು ಗ್ರಾಮ | 6.75 | 126 | 7.15 | 1.10 | 8.25 |
| 3 | ಸರ್ವೆ ನಂ. 399 ಮದೆ ಗ್ರಾಮ | 10.50 | 152 | 10.39 | 2.15 | 12.54 |
| 4 | ಸರ್ವೆ ನಂ. 178/1 ಕರ್ಣಂಗೇರಿ ಗ್ರಾಮ | 1.93 | 39 | 3.60 | 0.42 | 4.02 |
| 5 | ಸರ್ವೆ ನಂ. 347/3 ಬಿಳಿಗೇರಿ ಗ್ರಾಮ | 2.11 | 29 | 3.12 | 0.40 | 3.52 |
| | | ಒಟ್ಟು | 373 | ರೂ. 26.91 | ರೂ. 4.72 | ರೂ. 31.63 |

2. ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪ್ರಸ್ತಾವನೆಯಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು ಇವರು ಇತರೇ ವಿಷಯಗಳ ಜೊತೆಗೆ, ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಮೇಲಿನ ಕಂಡಿಕೆಯಲ್ಲಿನ ಕ್ರಮ ಸಂಖ್ಯೆ (1)

ರಲ್ಲಿನ ಸಂಪಾಜೆ ಗ್ರಾಮದ ಬದಲಿಗೆ ಮಾದಾಪುರ (ಜಂಬೂರು) ಗ್ರಾಮದ ಸರ್ವೆ ನಂ. 33/1 ರಲ್ಲಿನ 50 ಎಕರೆ ಪ್ರದೇಶವನ್ನು ಮನೆಗಳನ್ನು ನಿರ್ಮಿಸಲು ಹಸ್ತಾಂತರಿಸಿದ್ದು, ಇಲ್ಲಿ ನಿರ್ಮಿಸಲಾಗುತ್ತಿರುವ ಬಡಾವಣೆಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರದ ಆದೇಶ ಹೊರಡಿಸುವಂತೆ ಪ್ರಸ್ತಾಪಿಸಿರುತ್ತಾರೆ.

3. ಸರ್ಕಾರವು ಪ್ರಸ್ತಾವನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಕೊಡಗಿನ ನಿರ್ವಸಿತರಿಗೆ ಮನೆಗಳನ್ನು ನಿರ್ಮಿಸಿಕೊಡುವುದು ಅತ್ಯಂತ ತುರ್ತು ವಿಷಯವಾಗಿದ್ದು, ಇದಕ್ಕೆ ಪೂರಕವಾಗಿ ಮೂಲಭೂತ ಸೌಕರ್ಯಗಳುಳ್ಳ ಬಡಾವಣೆಗಳ ನಿರ್ಮಾಣವು ಸಹ ಅತ್ಯಂತ ತುರ್ತಿನ ವಿಷಯವೆಂದು ಪರಿಗಣಿಸುತ್ತಾ, ಕೆಳಕಂಡಂತೆ ಆದೇಶಿಸುತ್ತದೆ.

**ಸರ್ಕಾರದ ಆದೇಶ ಸಂಖ್ಯೆ: ವಇ 210 ಹೆಚ್‌ಎಎಂ 2018 (ಭಾಗ-1),**

**ಬೆಂಗಳೂರು, ದಿನಾಂಕ: 17-06-2019**

4. ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ವಇ 233 ಹೆಚ್‌ಎಎಂ 2018, ದಿನಾಂಕ: 05-12-2018 ರಲ್ಲಿನ ಆದೇಶ ಭಾಗದ ಅಂಶ (1) ರಲ್ಲಿ

*ಪ್ರಸ್ತಾವನೆಯಲ್ಲಿ ವಿವರಿಸಿರುವ ಕೊಡಗು ಜಿಲ್ಲೆಯ ಐದು ವಿವಿಧ ಸ್ಥಳಗಳಲ್ಲಿ ರೂ. 31.63 ಕೋಟಿಗಳ ಅಂದಾಜು ವೆಚ್ಚದಲ್ಲಿ ಬಡಾವಣೆಗಳನ್ನು ಮತ್ತು ಸಂಪರ್ಕ ರಸ್ತೆಗಳನ್ನು ಪ್ರಸ್ತಾವನೆಯಲ್ಲಿ ವಿವರಿಸಿರುವ ಮೂಲಭೂತ ಸೌಕರ್ಯಗಳೊಂದಿಗೆ ನಿರ್ಮಿಸಲು ಮಂಜೂರಾತಿ ನೀಡಲಾಗಿದೆ;*

ಎಂದು ತಿಳಿಸಲಾಗಿದ್ದು, ಪ್ರಸ್ತಾವನೆಯ ಭಾಗದ ಕಂಡಿಕೆ (3) ರಲ್ಲಿನ ಕ್ರಮ ಸಂಖ್ಯೆ (1) ರಲ್ಲಿ ನಮೂದಿಸಿರುವ *ಸರ್ವೆ ನಂ. 54/1, ಸಂಪಾಜೆ ಗ್ರಾಮ* ......... ಇದರ ಬದಲಿಗೆ, ಕೆಳಕಂಡ ವಿವರಗಳನ್ನು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು. ಇದರ ಹೊರತಾಗಿ ಇತರೇ ವಿವರಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

(ಕೋಟಿ ರೂಪಾಯಿಗಳಲ್ಲಿ)

| ಕ್ರ ಸಂ | ಬಡಾವಣೆಯ ಹೆಸರು | ವಿಸ್ತೀರ್ಣ (ಎಕರೆಗಳಲ್ಲಿ) | ಒಟ್ಟು ನಿವೇಶನಗಳ ಸಂಖ್ಯೆ | ಬಡಾವಣೆ ನಿರ್ಮಾಣದ ಅಂದಾಜು ವೆಚ್ಚ ರೂ. | ಸಂಪರ್ಕ ರಸ್ತೆ ನಿರ್ಮಿಸಲು ಅಂದಾಜು ವೆಚ್ಚ ರೂ. | ಒಟ್ಟು ಅಂದಾಜು ವೆಚ್ಚ ರೂ. |
|---|---|---|---|---|---|---|
| 1 | ಸರ್ವೆ ನಂ. 33/1 ಮಾದಾಪುರ (ಜಂಬೂರು) ಗ್ರಾಮದ | 50 | - | - | - | - |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್ ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ವಸತಿ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (G&SSA) (E&RSA) ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು

4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು. ವಿಧಾನ ಸೌಧ, ಬೆಂಗಳೂರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು. ಆರ್ಥಿಕ ಇಲಾಖೆ, ಬೆಂಗಳೂರು
6. ಮಾನ್ಯ ಮುಖ್ಯ ಮುಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
7. ಮಾನ್ಯ ವಸತಿ ಸಚಿವರ ಆಪ್ತ ಕಾರ್ಯದರ್ಶಿಗಳು. ವಿಕಾಸ ಸೌಧ, ಬೆಂಗಳೂರು
8. ಮಾನ್ಯ ಪ್ರವಾಸೋಧ್ಯಮ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು, ಕೊಡಗು ಜಿಲ್ಲೆ ಇವರ ಆಪ್ತ ಕಾರ್ಯದರ್ಶಿಗಳು
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪುನರ್ವಸತಿ), ಕಂದಾಯ ಇಲಾಖೆ
10. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು-560010.
11. ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ
12. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ಬೆಂಗಳೂರು-01.
13. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
14. ಸಹ ನಿರ್ದೇಶಕರು, ಖಜಾನೆ ಗಣಕಜಾಲ ಕೇಂದ್ರ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
15. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
16. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ವಿಶೇಷಾಧಿಕಾರಿ, ಬ್ಯಾಂಕಿಂಗ್, ಆರ್ಥಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
17. ಜಂಟಿ ನಿರ್ದೇಶಕರು (ಯೋಜನೆ) ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
18. ಸರ್ಕಾರದ ಉಪಕಾರ್ಯದರ್ಶಿ (ಆ &ಸಂ), ಆರ್ಥಿಕ ಇಲಾಖೆ, 2ನೇ ಮಹಡಿ, ವಿಧಾನಸೌಧ, ಬೆಂಗಳೂರು.
19. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಸರ್ಕಾರದ ಉಪಕಾರ್ಯದರ್ಶಿ, ವಸತಿ, ನಗರಾಭಿವೃದ್ಧಿ, ಕಾನೂನು ಮತ್ತು 'ಇ'ಆಡಳಿತ ಇಲಾಖೆ.
20. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-9) / (ಸಂಗ್ರಹಣಾ ಕೋಶ), ವಿಧಾನ ಸೌಧ, ಬೆಂಗಳೂರು.
21. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಸತಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
22. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ವಸತಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
23. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು /ಒಡಿಜಿಸಿ

17/6/19
ಸ್ವೀಕೃತಿ ಮತ್ತು ರವಾನೆ ಶಾಖೆ
ವಸತಿ ಇಲಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ